ಅಧ್ಯಕ್ಷರುಗಳನ್ನು ಕಾರ್ಯಕಾರಿ ಮುಖ್ಯಸ್ಥರನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಆದ್ದರಿಂದ, ಸಿಬ್ಬಂದಿಗಳು ಅಧ್ಯಕ್ಷರ ನೇರ ನಿಯಂತ್ರಣಕ್ಕೆ ಒಳಪಡುತ್ತಾರೆ.

ಹಾಸನ ಪಟ್ಟಣದ ಜಯಚಾಮರಾಜೇಂದ್ರ ಆಸ್ಪತ್ರೆಗೆ ಸಲಹಾ ಸಮಿತಿ ನೇಮಕ

1728 (2096) ಶ್ರೀ ಹನುಮೇಗೌಡ ಕೆ.ಹೆಚ್ (ಹಾಸನ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಪಟ್ಟಣದ ಜಯಚಾಮರಾಜೇಂದ್ರ ಆಸ್ಪತ್ರೆಗೆ (ಜಿಲ್ಲಾ ಆಸ್ಪತ್ರೆ) ಇದುವರೆವಿಗೂ ಸಲಹಾ ಸಮಿತಿಯನ್ನು ಸರ್ಕಾರ ರಚಿಸದಿರಲು ಕಾರಣಗಳೇನು? (ವಿವರ ಒದಗಿಸುವುದು)

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸೂಕ್ತ ಅಧಿಕಾರೇತರ ಸದಸ್ಯರನ್ನು ಗುರುತಿಸುವುದರಲ್ಲಿ ಸ್ವಲ್ಪ ತಡವಾಗಿರುತ್ತದೆ.

ಹಳೇ ಹುಬ್ಬಳ್ಳಿ ಈಶ್ವರ ನಗರ ಮಾರ್ಗದ ರಸ್ತೆ ದುರಸ್ತಿ ಕುರಿತು

1729 (969) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಳೇ ಹುಬ್ಬಳ್ಳಿ ಈಶ್ವರ ನಗರ ಮಾರ್ಗವಾಗಿ ಮಾವನೂರ ಗ್ರಾಮಕ್ಕೆ ಹೋಗುವ ರಸ್ತೆ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಸದರಿ ರಸ್ತೆ ಡಾಂಬರೀಕರಣ ಮಾಡಲಿಕ್ಕೆ ಸರಕಾರ ಹಣ ಬಿಡುಗಡೆ ಮಾಡಿದೆಯೇ;

3) ಸದರಿ ರಸ್ತೆಗೆ ತಗಲುವ ಅಂದಾಜು ವೆಚ್ಚವೆಷ್ಟು;

4) ಕಾಮಗಾರಿ ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ಸರ್ಕಾರದ ಗಮನಕ್ಕೆ ಬಂದಿದೆ

2) ರೂ. 61.52 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

3) ರೂ. 61.52 ಲಕ್ಷಗಳು

4) ಈ ಕಾಮಗಾರಿಯ ಕೆಲಸ ಪ್ರಗತಿಯಲ್ಲಿದ್ದು, 2002ರ ನವೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

1730 (2028) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ, ದೌದಿಯರ, ಲ್ಯಾಬ್ ಟೆಕ್ನಿಶಿಯನ್, ಸಹಾಯಕರ ಹಾಗೂ ಜವಾನರ ಹುದ್ದೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಖಾಲಿ ಇರುವ ಮೇಲ್ಕಂಡ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡು ಕ್ರಮವೇನು;

ಇ) ನೇಮಕಾತಿ ಪ್ರಕ್ರಿಯೇ ಪ್ರಾರಂಭವಾಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ವೈದ್ಯರ ಹುದ್ದೆಗಳು - 19
ದೌದಿಯರು - 03
ಲ್ಯಾಬ್ ಟೆಕ್ನಿಷಿಯನ್ - 09
ಸಹಾಯಕರು ಮತ್ತು ಜವಾನರು - 06
(ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ)

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್-ಎ ಶ್ರೇಣಿಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯನ್ನು ವಿಶೇಷ ನೇಮಕಾತಿ ಸಮಿತಿಯಿಂದ 550 ವೈದ್ಯರ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟವಾಗಿದ್ದು, ಅಂತಿಮ ಪಟ್ಟಿ ಪ್ರಕಟವಾದ ಕೂಡಲೇ ಭರ್ತಿ ಮಾಡಲಾಗುವುದು. 80 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಇಷ್ಟರಲ್ಲಿಯೇ ಭರ್ತಿ ಮಾಡಲಾಗುವುದು. ಜಿಲ್ಲಾಧಿಕಾರಿಗಳಿಗೆ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ, ಗೌರವ ಧನದ ಆಧಾರದ ಮೇಲೆ ನಿವೃತ್ತಿ ಸರ್ಕಾರಿ ತಜ್ಞ ವೈದ್ಯರನ್ನು ಹಾಗೂ ಖಾಸಗಿ ಸಮಾಲೋಚಕರನ್ನು ನೇಮಕ ಮಾಡಲು ಅಧಿಕಾರ ನೀಡಲಾಗಿದೆ.

29 ವಿವಿಧ ವೃಂದದ ಸುಮಾರು 6000 ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ವಿಶೇಷ ನಿಯಮಗಳನ್ನು ರೂಪಿಸಲಾಗಿದೆ.

ಇ) ಸದ್ಯದಲ್ಲಿಯೇ ಪ್ರಾರಂಭವಾಗಲಿದೆ.

ಸ್ವರ್ಣ ರೋಜಗಾರ್ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದ ಹಣ

1732 (2030) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-02ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್‌ಗಳಿಗೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಬಿಡುಗಡೆಯಾಗಿರುವ ಹಣ ಎಷ್ಟು;

ಆ) ಈ ಹಣ ಬಿಡುಗಡೆಗಾಗಿ ಯಾವ ಯಾವ ಜಿಲ್ಲೆಗಳು ಯೋಜನಾ ಪ್ರಸ್ತಾವನೆಗಳನ್ನು ಕಳುಹಿಸಿದ್ದವು; ಇನ್ನುಳಿದ ಜಿಲ್ಲೆಗಳು ಪ್ರಸ್ತಾವನೆಗಳನ್ನು ಕಳುಹಿಸದಿರಲು ಕಾರಣವೇನು; (ಜಿಲ್ಲೆಗಳ ವಿವರ ನೀಡುವುದು)

ಇ) ನಿರ್ಲಕ್ಷ ಮಾಡಿರುವ ಈ ಜಿಲ್ಲಾ ಪಂಚಾಯತ್‌ಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 2001-02ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್‌ಗಳಿಗೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ರೂ. 1659.33 ಲಕ್ಷ ಬಿಡುಗಡೆಯಾಗಿದೆ.